ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆ ಒಳಪಟ್ಟಿದ್ದು ಅವರನ್ನು ಪಿಡಬ್ಲೂ-1 ಎಂದು ಪರಿಗಣಿಸಿ ಇಂದು ದಿನಾಂಕಃ29.03.2022 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ. ವಿ ಆರ್ ಎನ್ ವಕೀಲರಿಂದಃ

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ನನ್ನ ಮುಖ್ಯ ವಿಚಾರಣಾ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ನಿಜವಿರುತ್ತವೆ ಮತ್ತು ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ .

ಸದರಿ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ಕೆಳಕೊಪ್ಪ ಗ್ರಾಮದ ಸ.ನಂಃ 150 ರ ಪಹಣಿ ಪತ್ರಿಕೆ ನಿಪಿ-1
2. ದಿನಾಂಕಃ04.11.2020 ರಂದು ಆಶ್ರಯ ಮನೆ ಕಟ್ಟಿಸುವ ಬಗ್ಗೆ ತಹಶೀಲ್ದಾರ್ ರವರಿಗೆ ನೀಡಿರುವ ಪತ್ರ ನಿಪಿ-2
3. ದಿನಾಂಕಃ25.11.2020 ರಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯ್ತಿ, ಶೃಂಗೇರಿ ರವರು ವಸತಿ ಯೋಜನೆಯಡಿ ಕುರಿತು ನೀಡಿರುವ ಜ್ಞಾಪನ ಪತ್ರ ಮತ್ತು ಅದರ ಅಂಚೆ ಲಕೋಟೆ ನಿಪಿ-3 ಮತ್ತು 4
4. ದಿನಾಂಕಃ02.01.2021 ಮತ್ತು 04.01.2021 ರಂದು ನೀಡಿರುವ ಎರಡು ತಿಳುವಳಿಕೆ ಪತ್ರಗಳು ಹಾಗೂ ಒಂದು ಅಂಚೆ ಲಕೋಟೆಯನ್ನು ಕ್ರಮವಾಗಿ ನಿಪಿ-5 ರಿಂದ 7
5. ದಿನಾಂಕಃ09.01.2021 ರಂದು ನೀಡಿರುವ ತಿಳುವಳಿಕೆ ಪತ್ರ ನಿಪಿ-8
6. ದಿನಾಂಕಃ11.01.2021 ರಂದು ವಾದಿ ಜಿಲ್ಲಾಧಿಕಾರಿ, ಚಿಕ್ಕಮಗಳೂರು, ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯ್ತಿ ಶೃಂಗೇರಿ ಮತ್ತು ಪಿಡಿಓ ಅಡ್ಡಗದ್ದೆ ಗ್ರಾಮ ಪಂಚಾಯ್ತಿ ರವರಿಗೆ ಬರೆದಿರುವ 3 ಮನವಿ ಪತ್ರಗಳು ಮತ್ತು ಒಂದು ಕೊರಿಯರ್ ರಶೀದಿಗಳನ್ನು ಕ್ರಮವಾಗಿ ನಿಪಿ-9 ರಿಂದ 12
7. 4 ಪೋಟೋಗಳು ಮತ್ತು ಒಂದು ಸಿಡಿ ಯನ್ನು ಕ್ರಮವಾಗಿ ನಿಪಿ-13 ರಿಂದ 17 ಎಂದು ಗುರುತಿಸಲಾಯಿತು.

ಆದ್ದರಿಂದ ನನ್ನ ಪರವಾಗಿ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ .

**<u>ಪಾಟೀ ಸವಾಲುಃ</u>** ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಶೃಂಗೇರಿ.